# ಕನ್ನಡ ಸಾಹಿತ್ಯ ಮತ್ತು ವೈಚಾರಿಕತೆ.

*ಶ್ರೀನಿವಾಸ.ಎಸ್.ನಲವಾಗಲ*

*ಕನ್ನಡ ಅತಿಥಿ ಉಪನ್ಯಾಸಕರು*

*ಸರ್ಕಾರಿ ಪ್ರಥಮ ದರ್ಜೆ ಕಾಲೇಜು.ಗಾಂಧಿಪುರ*

*ಜಿಲ್ಲಾ:– ಹಾವೇರಿ*

**ಪೀಠಿಕೆ :–**

ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಯು ಬಹಳ ಪ್ರಗತಿದಾಯಕವಾದ ವಿಚಾರಧಾರೆಗಳನ್ನು ಅಭಿವ್ಯಕ್ತಪಡಿಸುವುದನ್ನು ಕಾಣಬಹುದು. ಮಾನವ ಇತರ ಪ್ರಾಣಿಗಳಿಗಿಂತ ಭಿನ್ನವಾಗಿರುವುದಕ್ಕೆ ಕಾರಣ ಅವನಲ್ಲಿರುವ ಆಲೋಚನಾ ಕ್ರಮ , ಮನುಷ್ಯನು ತಾನು ಕಂಡುಕೊಂಡ ಸಮಾಜದಲ್ಲಿ ಇರುವ ಗೊಡ್ಡು ಸಂಪ್ರದಾಯಗಳು , ದೇವರು , ಧರ್ಮ , ಮತ , ಸ್ವರ್ಗ , ನರಕ , ಮಾಟ – ಮಂತ್ರ ಮುಂತಾದ ವಿಷಯಗಳಿಂದಾಗಿ ಅನೇಕ ಸಮಸ್ಯೆ ಹಾಗೂ ಸವಾಲುಗಳಿಗೆ ಅವರು ತನ್ನದೇ ಆದ ಆಲೋಚನಾ ಕ್ರಮ ಹಾಗೂ ಚಿಂತನೆಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ಪರಿಹಾರ ಕಂಡುಕೊಳ್ಳುವಲ್ಲಿ ಅವನ ಸಂಸ್ಕೃತಿಯ ಪರಂಪರೆ ಮತ್ತು ಭಾಷೆಯನ್ನು ಬಳಸುವುದು , ಅವನ ಬುದ್ಧಿಶಕ್ತಿಯ ಬಲದಿಂದ ಮಾತ್ರ ಸಾಧ್ಯ.

ವೈಚಾರಿಕತೆ ಎಂದರೆ ಯತಾಸ್ಥಿತಿಯನ್ನು ಶಂಕಿಸುವುದು ಸಂಪ್ರದಾಯದಲ್ಲಿ , ಸಂಕೇತಗಳಲ್ಲಿ , ಮೌಲ್ಯಗಳಲ್ಲಿ , ಆಚರಣೆಗಳಲ್ಲಿ , ಘಟನೆಗಳಲ್ಲಿ ಇನ್ನೂ ಹಲವು ಸಂಗತಿಗಳಲ್ಲಿ ಸರಿ ಸಮಾನತೆ ಕಾಣದಿದ್ದಾಗ ನಮ್ಮಲ್ಲಿ ಮಾನಸಿಕ ಸಂಘರ್ಷ ನಡೆದು ತಾರ್ಕಿಕವಾದ ವಿವೇಚನೆ ಹೊರಬಂದು ಭಿನ್ನವಾದ ಪ್ರತಿಕ್ರಿಯೆ 'ವೈಚಾರಿಕತೆ' ಎನಿಸಿಕೊಳ್ಳುವುದು. ವೈಚಾರಿಕತೆಯ ಬಗ್ಗೆ ಹುತಾತ್ಮ ಭಗತ್ ಸಿಂಗ್ " ಪ್ರಗತಿಗೆ ಬದ್ಧನಾದ ಯಾವುದೇ ವ್ಯಕ್ತಿಯ ಹಳೆಯ ನಂಬಿಕೆಗಳ ಪ್ರತಿಯೊಂದು ಅಂಶವನ್ನು ವಿಮರ್ಶಿಸಿ ಅದನ್ನು ಅನುಮಾನದಿಂದ ನೋಡಿ ಸವಾಲೆಸೆಯಬೇಕು" ಪ್ರಚಲಿತವಾದ ನಂಬಿಕೆಗಳ ಮೇಲೆ ಮೂಲೆ ಮೂಲೆಗಳನ್ನು ಶೋಧಿಸಿ ಒಂದಂಶವನ್ನು ಬಿಡದೆ ತರ್ಕದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಬೇಕು.

ತನ್ನನ್ನು ವಾಸ್ತವವಾದಿ ಎಂದು ಕರೆದುಕೊಳ್ಳುವವನು ಎಲ್ಲಾ ಪ್ರಾಚೀನ ನಂಬಿಕೆಗಳನ್ನು ಇಡಿಯಾಗಿ ಪ್ರಶ್ನಿಸಬೇಕು. ಅವನ ಮೊದಲ ಕೆಲಸವೆಂದರೆ ಆ ಎಲ್ಲಾ ನಂಬಿಕೆಗಳನ್ನು ನೆಲಸಮ ಮಾಡಿ ಹೊಸ ತತ್ವಶಾಸ್ತ್ರದ ನಿರ್ಮಾಣಕ್ಕೆ ಅಗತ್ಯವಾದ ಜಾಗವನ್ನು ತೆರವು ಮಾಡಿಕೊಳ್ಳುವುದು ಈ ಚಿಂತನೆಗಳು ವೈಚಾರಿಕತೆಗೆ ಪುಷ್ಟಿಯನ್ನು ನೀಡುತ್ತವೆ.

## ವಿಚಾರ ಸಾಹಿತ್ಯದ ಸ್ವರೂಪ ಮತ್ತು ಉದ್ದೇಶ :-

'ವಿಚಾರ' ಎಂಬ ಪದಕ್ಕೆ ವಿವೇಕ , ವಿವೇಚನೆ , ನ್ಯಾಯ ನಿರ್ಣಯ , ಪರ್ಯಾಲೋಚನೆ , ವಿಮರ್ಶೆ ಎಂಬ ಅರ್ಥಗಳಿವೆ. ಇಂಗ್ಲೀಷ್ ನ ಖಚಿಣಖಂಟಿಚಿಟ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ವೈಚಾರಿಕತೆ' ಪದವು ಬಳಕೆಯಲ್ಲಿದೆ. ಇಂದು ಜಗತ್ತಿನಾದ್ಯಂತ ವೈಚಾರಿಕತೆಯ ಖಚಿಣಖಂಟಿಚಿಟಝಟ ವಾದವಾಗಿ ಪ್ರಚಲಿತದಲ್ಲಿದೆ. ಇತ್ತೀಚಿನ ವೈಜ್ಞಾನಿಕ ಯುಗದಲ್ಲೂ ಸಹ ಮಾನವರು ಕೋಮು , ಜಾತಿ , ಲಿಂಗ , ವರ್ಣಭೇದದಿಂದ ಸ್ವಾರ್ಥಿಗಳಾಗಿ ಮಾನವೀಯ ಗುಣಗಳಿಂದ ದೂರ ಸರಿಯುವುದು ಕಂಡು ಬರುತ್ತದೆ. ಸೌಹಾರ್ದತೆ , ಭಾತೃತ್ವ , ಭಾವೈಕ್ಯತೆಗಳ ಕೊರತೆ ಉಂಟಾಗಿ ದ್ವೇಷದ ಮನಸ್ಥಿತಿಯಿಂದ ಬದುಕುತ್ತಿರುವುದು ಅಷ್ಟೇ ಅಲ್ಲದೆ ಅನಕ್ಷರತೆ , ಬಡತನ , ಅಜ್ಞಾನ , ಮೂಢನಂಬಿಕೆ , ಗೊಡ್ಡು ಸಂಪ್ರದಾಯ , ಅಂಧ ಆಚರಣೆಗಳು ಹೆಚ್ಚಾಗಿವೆ. ಇದರಿಂದ ಸಾರ್ವಜನಿಕರ ಬದುಕು ಕುಸಿದು ಅದಃಪತನಕ್ಕೆ ಇಳಿದಿವೆ. ಮಾನವರ ಮೇಲೆ ವಿಷಮತೆಯನ್ನುಂಟು ಮಾಡುವ ಭಾವನೆಗಳನ್ನು ಹೊಡೆದೋಡಿಸಲು ಅಭಿಮಾನ , ಬಂಧುತ್ವ , ಐಕ್ಯತೆ , ಸಹೋದರತೆ , ಸ್ವಾತಂತ್ರದ ಬಗ್ಗೆ ಜಾಗೃತಗೊಳಿಸುವ ಚಿಂತನಾ ಮಾರ್ಗವೇ ವೈಚಾರಿಕತೆ. ಈ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಚಿಂತಕರಾದ ಬರ್ಟಾಂಡ್ ರಸೆಲ್ ರು ಹೇಳುವಂತೆ "ಮನುಷ್ಯನ ಅನೇಕ ಸಂಕಷ್ಟಗಳು ವೈಚಾರಿಕತೆಯಿಂದ ಅಂತ್ಯಗೊಳ್ಳಲು ಸಾಧ್ಯ" ಎಂಬ ಮಾತು ಸೂಕ್ತಾರ್ಹವಾದುದು.

ವೈಚಾರಿಕತೆಯು ವ್ಯಕ್ತಿ ಸ್ವಾತಂತ್ರಕ್ಕೆ ಮತ್ತು ಬೌದ್ಧಿಕ ಜ್ಞಾನಾರ್ಜನೆಗೆ ಮಹತ್ವ ನೀಡಿ ರಾಷ್ಟ್ರಗಳಲ್ಲಿರುವ ಜಾತಿ ಮತ ಧರ್ಮಗಳ ನಡುವಿನ ಕಲಹಗಳ ನಿವಾರಣೆಯಲ್ಲಿ ಪ್ರಮುಖ ಪಾತ್ರವಹಿಸುವ ಸೌಹಾರ್ದತೆಯನ್ನು ಬೆಳೆಸುತ್ತಾ ರಾಷ್ಟ್ರಾಭಿವೃದ್ಧಿಗೆ ಪೂರಕವಾದ ವಿದ್ಯೆ , ಕಲೆ , ಸಾಹಿತ್ಯ , ಸಂಸ್ಕೃತಿಗಳನ್ನು ಪ್ರೇರೇಪಿಸುವ ಚಿಂತನೆಯ ಬರಹವೇ ವೈಚಾರಿಕ ಅಥವಾ ವಿಚಾರ ಸಾಹಿತ್ಯ.

ವಿಚಾರ ಸಾಹಿತ್ಯ ಕೃಷಿಯು ಮೌಲ್ಯಗಳ ಮರು ಪರಿಶೀಲನೆ. ಮೌಲ್ಯಮಾಪನ ಹಾಗೂ ಮೌಲ್ಯಗಳ ಅಂಚುಗಳನ್ನು ಗುರುತಿಸುವ ಹಂತಗಳು ವಿಚಾರವಾದದಿಂದ ಪ್ರಾರಂಭವಾಗಿ ವಿಚಾರವಾದದಿಂದ ಮುಕ್ತಾಯವಾಗುವಂತಹವು. ಮನುಷ್ಯನ ಬುದ್ಧಿಶಕ್ತಿಗೆ ಎರಡು ಆಯಾಮಗಳಿರವುದು. 1. ವಿಚಾರಶಕ್ತಿ 2. ಬುದ್ಧಿಶಕ್ತಿ.

ವಿಚಾರ ಸಾಹಿತ್ಯದ ವಿವಿಧ ರಂಗಗಳಾದ ಜ್ಞಾನ – ವಿಜ್ಞಾನ , ದರ್ಶನ , ಮನಶಾಸ್ತ್ರ , ವಿದ್ಯೆ , ಕಲೆ , ವಿಮರ್ಶೆ , ರಾಜಕಾರಣ , ತಂತ್ರ ವಿಧಾನ , ಇತಿಹಾಸ , ಸಂಸ್ಕೃತಿ , ಭೂಗೋಳ , ಗಣಿತ , ವೈದ್ಯ , ಕಾಯಿದೆ, ವಾಣಿಜ್ಯ , ಅರ್ಥಶಾಸ್ತ್ರ , ವೇದಾಂತ , ಜ್ಯೋತಿಷ್ಯ , ಕೈಗಾರಿಕೆ ಇತ್ಯಾದಿ ಇತ್ಯಾದಿ ರಂಗಗಳಲ್ಲಿ ಬಾಹ್ಯ ಮತ್ತು ಆಂತರಿಕವಾಗಿ ಬೆಳೆದು ಬಂದಿದೆ. ವಿಚಾರ ಸಾಹಿತ್ಯದ ಕೃಷಿಯಾಗುವುದು ಅಸಾಧಾರಣ ಬುದ್ಧಿವಂತನ ಮಾನಸಿಕ ಸಂಘರ್ಷಗಳ ಅಂತರಂಗದ ಹೋರಾಟದ ಮೂಲಕ ನಿರ್ದಿಷ್ಟವಾದ ಸತ್ಯದ ಗುರಿಯನ್ನು ಮುಟ್ಟುವ ಬಾಹ್ಯ ಹೋರಾಟ ಅಥವಾ ಕ್ರಾಂತಿಯಿಲ್ಲವೇ ಚಳುವಳಿ ಎಂದು ಪರಿಭಾವಿಸುವುದು.

## ವಿಚಾರ ಸಾಹಿತ್ಯದ ಪರಂಪರೆ :-

ವೈಚಾರಿಕ ಅಥವಾ ವಿಚಾರ ಸಾಹಿತ್ಯ ಪರಂಪರೆಯು ಪಾಶ್ಚಾತ್ಯ ಮತ್ತು ಭಾರತೀಯ ಪರಂಪರೆಗಳೆರಡರಲ್ಲೂ ವೈಚಾರಿಕ ಆಲೋಚನೆ ಮಾಡುವ ಕ್ರಮಗಳು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ . ಸಂಸ್ಕೃತಿಯ ತೊಟ್ಟಿಲು ಎಂದು ಹೆಸರು ಪಡೆದ ಗ್ರೀಸ್ ದೇಶದ ಥೇಲೀಸ್ ವಿಚಾರವಾದಿಯಿಂದ ಪ್ರಾರಂಭವಾಗಿದೆ ಎಂದು ಹೇಳಬಹುದು. ಸಾಕ್ರಟೀಸ್ ನು ಕ್ರಿ.ಪೂ.5 ನೇ ಶತಮಾನದ ಅಗ್ರಮಾನ್ಯ ವಿಚಾರವಾದಿಯಾಗಿದ್ದನು. ಇವನ ತರುವಾಯ ಇವನ ಶಿಷ್ಯನಾದ ಪ್ಲೇಟೋ , ಇಂಗ್ಲೆಂಡಿನ ಸರ್. ಪ್ರಾನ್ಸಿಸ್ ಬೇಕನ್ , ಥಾಮಸ್ ಹಾಬ್ಸ್ , ಚಾರ್ಲ್ಸ್ ಡಾರ್ವಿನ್ , ಬರ್ಟಾಂಡ್ ರಸೆಲ್ , ಪ್ರೆಂಚ್ ದೇಶದ ರೆನೆಡ್ ಕಾರ್ಟ್ , ಪೊಟ್ಟೆಯರ್ , ರೂಸೋ

, ಜರ್ಮನ್ ದೇಶದ ಇಮ್ಯಾನ್ಯುಯಲ್ ಕಾಂಟ್ , ನಂತರ ಹೆಗೆಲ್ , ಜಾನ್ಸ್ ಸ್ಟುವರ್ಟ್ ಮಿಲ್ , ಕೋಮ್ಟ್ , ಲೆನಿನ್ , ಮಾರ್ಕ್ಸ್ ಇನ್ನೂ ಮುಂತಾದವರು ಮಾಡಿದ ವೈಚಾರಿಕ ಕ್ರಾಂತಿಗಳು ಮಹತ್ವವಾದವುಗಳು.

ಪಾಶ್ಚಾತ್ಯರಿಗಿಂತ ಮೊದಲು ಭಾರತದಲ್ಲಿ ವೈಚಾರಿಕ ಮನೋಭಾವದ ಚಿಂತನೆಗಳು ಚಾಲ್ತಿಯಲ್ಲಿದ್ದದು ಕಂಡು ಬರುತ್ತದೆ. ಗ್ರೀಸ್ ದೇಶಕ್ಕಿಂತ ಭಾರತದಲ್ಲಿ ವೈಚಾರಿಕತೆಯು ಪ್ರಾಚೀನತೆ ಹೊಂದಿತ್ತು ಎನ್ನಲು 'ಮೌಲನ್ ಅಬ್ದುಲ್ ಕಲಾಂ ಆಜಾದ್ ರ' ಅಭಿಪ್ರಾಯದಂತೆ ಭಾರತದಲ್ಲಿದ್ದ ಬೌದ್ಧ ಮತ್ತು ಜೈನ ಧರ್ಮ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಪೂರ್ಣಕಶ್ಯಪ , ಮಕಲಿ ಗೋಶಾಲ , ನಿಗಂಠನಾಥಪುತ , ಸಂಜಯಬೇಲಟ್ಟಿಪುತ , ಪ್ರಕೃತ ಕಾತ್ಯಾಯನ , ಅಶಿತ ಕೇತ , ಕಂಬಲಿ , ಮುಂತಾದ ಪ್ರಮುಖ ಚಿಂತಕರ ಹೆಸರುಗಳು ಉಲ್ಲೇಖಿತವಾಗಿವೆ. ನಂತರದಲ್ಲಿ ಬಂದ ಚಾರ್ವಾಕ , ಲೋಕಾಯತನ , ಸಂತರು , ಶರಣರು , ಸೂಫಿಗಳು ಭಾರತದಲ್ಲಿ ವೈಚಾರಿಕತೆಯನ್ನು ಪ್ರತಿಪಾದನೆ ಮಾಡಿದ್ದಾರೆ.

ಇದೇ ವೈಚಾರಿಕತೆಯನ್ನು ಅತ್ಯಂತ ಸೂಕ್ತವಾದ ಚಿಂತನೆಗಳ ಮೂಲಕ ಅಭಿವ್ಯಕ್ತಪಡಿಸಿದವರೆಂದರೆ ಕಬೀರ , ದಾದು ಮತ್ತು ರಜಬ್ ರಮಾನಂದ , ಬಸವಣ್ಣ , ಗಲೀಬ್ ದಾಸ್ , ಚೈತನ್ಯ ಮತ್ತು ಕರ್ನಾಟಕದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಶರಣರ ಚಳುವಳಿಯು ಭಾರತಾದ್ಯಂತ ಕ್ರಾಂತಿಯ ಮಾರ್ಗದಲ್ಲಿ ನಡೆದಿದೆ. ಬ್ರಿಟೀಷರ ಆಗಮನದಿಂದ ಭಾರತೀಯರ ಆಲೋಚನಾ ಕ್ರಮದಲ್ಲಿ ಸಾಕಷ್ಟು ಬದಲಾವಣೆಯಾಗಿ ನಂಬಿಕೆ , ಆಚರಣೆ , ರೂಢಿ ಸಂಪ್ರದಾಯಗಳ ಬಗ್ಗೆ ಚಿಂತನೆಯ ಸಾಣೆಯಾಗಿದ್ದರಿಂದ ಈಶ್ವರಚಂದ್ರ ವಿದ್ಯಾಸಾಗರ , ರವೀಂದ್ರನಾಥ ಠಾಗೋರ್ , ಎಂ.ಎನ್. ರಾಯ್ , ರಾಹುಲ್ ಸಾಂಕಾತಾಯನ , ಸ್ವಾಮಿ ವಿವೇಕಾನಂದ , ಜ್ಯೋತಿಬಾಪುಲೆ , ನಾರಾಯಣ ಗುರು , ಪೆರಿಯಾರ್ , ಮಾಹಾತ್ಮ ಗಾಂಧಿ , ಅಂಬೇಡ್ಕರ್ , ಬಿ.ಶ್ಯಾಮಸುಂದರ್ , ಲೋಹಿಯಾ , ಜಯಪ್ರಕಾಶ್ ನಾರಾಯಣರಾವ್ ರವರು ಪ್ರಚಾರಪಡಿಸಿದ ವಿಚಾರಧಾರೆಗಳು ಅಂದಿನ ಸಮಾಜದಲ್ಲಿ ವೈಚಾರಿಕತೆಯ ಕ್ರಾಂತಿಯನ್ನು ಮಾಡಿದುದು ಇತಿಹಾಸ.

ಕನ್ನಡದಲ್ಲಿಯೂ ವೈಚಾರಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಾಲಕ್ಕೆ ತಕ್ಕಂತೆ ಮಹತ್ವದ ವೈಚಾರಿಕ ಚಿಂತನೆಗಳು ಮೂಡಿ ಬಂದಿವೆ. ಪ್ರಾಚೀನ ಸಾಹಿತ್ಯವನ್ನು ಅವಲೋಕಿಸಿದಾಗ ಪಂಪ , ರನ್ನ , ಜನ್ನ , ಬಸವ , ಅಲ್ಲಮಪ್ರಭು , ಅಕ್ಕಮಹಾದೇವಿ ಶಿವಶರಣರು. ದಾಸರು , ಹರಿಹರ , ರಾಘವಾಂಕ ಹಾಗೂ ಸರ್ವಜ್ಞ ಇನ್ನೂ ಮುಂತಾದವರಲ್ಲಿ ವೈಚಾರಿಕ ವಿಚಾರಧಾರೆಗಳು ಮುಪ್ಪರಿಗೊಂಡಿರುವುದನ್ನು ಕಾಣಬಹುದು. ಆಧುನಿಕ ಸಾಹಿತ್ಯದಲ್ಲಿ ರಾಷ್ಟ್ರಕವಿಗಳಾದ ಗೋವಿಂದ ಪೈ , ಕುವೆಂಪು , ಜಿ.ಎಸ್.ಶಿವರುದ್ರಪ್ಪ ಹಾಗೂ ಸಿದ್ಧಯ್ಯ ಪುರಾಣಿಕ , ಶಿವರಾಮ ಕಾರಾಂತ , ಗೌರೀಶ್ ಕಾಯ್ಕಿಣಿ , ಅನಂತಮೂರ್ತಿ , ಪಿ.ಲಂಕೇಶ್ , ಎಚ್.ನರಸಿಂಹಯ್ಯ , ಬರಗೂರು ರಾಮಚಂದ್ರಪ್ಪ , ದೇವನೂರು ಮಹಾದೇವ , ಮುಂತಾದವರ ವೈಚಾರಿಕತೆಯ ಮಹತ್ವ ತಿಳಿಯಬಹುದು.

## ವಚನಗಳಲ್ಲಿ ವೈಚಾರಿಕತೆ :-

ಕರ್ನಾಟಕದಲ್ಲಿ ಹನ್ನೆರಡನೇ ಶತಮಾನವನ್ನು ಸಮಾಜೋ – ಧಾರ್ಮಿಕ ಆಂದೋಲನದ ಯುಗವೆಂದು ಕರೆಯಲಾಗಿದೆ. ಅಂದಿನ ಸಮಾಜದಲ್ಲಿ ಮೂಢನಂಬಿಕೆ , ಅಸ್ಪೃಶ್ಯತೆ , ಜಾತೀಯತೆ , ಸ್ತ್ರೀ ಶೋಷಣೆ , ಅಸಮಾನತೆ ಇನ್ನೂ ಅನೇಕ ವೈರುಧ್ಯಗಳು ಮನೆ ಮಾಡಿಕೊಂಡಿದ್ದವು. ಆಗ 'ವಚನ' ಎಂಬ ಜ್ಞಾನ ಜ್ಯೋತಿಯ ಮೂಲಕ ಸಮಾಜವನ್ನು ಕತ್ತಲಿನಿಂದ ಬೆಳಕಿನೆಡೆಗೆ , ಅಜ್ಞಾನದಿಂದ ಜ್ಞಾನದೆಡೆಗೆ ತರುವ ಪ್ರಯತ್ನವನ್ನು ಅಂದಿನ ಶಿವಶರಣ – ಶರಣೆಯರು ಮಾಡಿದರು.

- ***ಅಂಬಿಗರ ಚೌಡಯ್ಯನವರ ವಚನಗಳಲ್ಲಿ ವೈಚಾರಿಕತೆ :-***

ಹನ್ನೆರಡನೇ ಶತಮಾನದ ಪ್ರಮುಖ ವಚನಕಾರ ಅಂಬಿಗರ ಚೌಡಯ್ಯ ವಿವಿಧ ವೃತ್ತಿಯಿಂದ ಬಂದ ವಚನಕಾರರು ತಂತಮ್ಮ ವೃತ್ತಿಯನ್ನೇ ಅಂಕಿತವಾಗಿ ಬಳಸಿದ್ದು ಸಾಮಾನ್ಯ. ಇವನ ವಚನಗಳಲ್ಲಿ ತಾತ್ವಿಕತೆಯಿಂದ ನೈತಿಕತೆಗೆ ಹಾಗೂ ಸಮಾಜಿಕತೆಗೆ ಒತ್ತು ನೀಡಲಾಗಿದೆ.

- ***ಲೋಕನೀತಿ :-***

ಅಂಬಿಗರ ಚೌಡಯ್ಯನ ಬಹಳಷ್ಟು ವಚನಗಳು ಲೋಕನೀತಿಯ ಆಗರವಾಗಿವೆ. ಒಟ್ಟಾರೆ ಸಮಾಜ ಸುಧಾರಣೆಯಾಗಬೇಕೆಂಬುದು ಅವನ ಕಳಕಳಿ. ಈ ವಚನ ಗಮನಿಸಿದಾಗ

***" ಬಡತನಕ್ಕೆ ಉಂಬುವ ಚಿಂತೆ , ಉಣಲಾದರೆ ಉಡುವ ಚಿಂತೆ***
***ಉಡಲಾದರೆ ಇಡುವ ಚಿಂತೆ , ಇಡಲಾದರೆ ಹೆಂಡಿರ ಚಿಂತೆ***
***ಹೆಂಡಿರಾದರೆ ಮಕ್ಕಳ ಚಿಂತೆ , ಮಕ್ಕಳಾದರೆ ಬದುಕಿನ ಚಿಂತೆ***
***ಬದುಕಾದರೆ ಕೇಡಿನ ಚಿಂತೆ , ಕೇಡಾದರೆ ಮರಣದ ಚಿಂತೆ***
***ಇಂತಿ ಹಲವು ಚಿಂತೆಯಲ್ಲಿ ಇಪ್ಪವರ ಕಂಡೇನು.***
***ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ***
***ನಮ್ಮ ಅಂಬಿಗರ ಚೌಡಯ್ಯ"***

ಆಸೆಗಳು ಹೇಗೆ ಒಂದಕ್ಕೊಂದು ಅಂಟಿಕೊಂಡು ಬರುತ್ತವೆಂಬದನ್ನು ಮಾರ್ಮಿಕವಾಗಿ ವಿವರಿಸಿದ್ದಾನೆ. ಮನುಷ್ಯ ಹಲವು ಆಸೆಗಳ ಶಿಖರವೇರಲು ಚಿಂತೆಯೆಂಬ ಹಾದಿಯಲ್ಲಿ ದೇಹ ಮತ್ತು ಮನಸ್ಸು ಅಣಿಗೊಳಿಸಿ ಕೊನೆಗೆ ಚಿಂತೆಯೆಂಬ ಕೂಪದಲ್ಲಿ ಬಿದ್ದು ಅದರಿಂದ ಹೊರ ಬರಲಾಗದೆ ಚಿಂತೆಯಲ್ಲಿಯೇ ಚಿತೆಯೇರುತ್ತಾನೆ ಎಂದು ಹೇಳಿದ್ದಾನೆ. ಬಹುಶಃ ಬುದ್ಧನ ಉಪದೇಶ 'ಆಸೆಯೇ ದುಃಖಕ್ಕೆ ಮೂಲ' ಎಂಬ ಮಾತು ಪ್ರಸ್ತುತ ಈವಚನಕ್ಕೆ ಅನ್ವಯಿಸುತ್ತದೆ.

## ***ದಾಸ ಸಾಹಿತ್ಯದಲ್ಲಿ ವೈಚಾರಿಕತೆ :-***

ಕರ್ನಾಟಕದಲ್ಲಿ ಹದಿನಾರನೇ ಶತಮಾನವನ್ನು ದಾಸ ಯುಗವೆಂದು ಕರೆಯಲಾಗಿದೆ. ಕೀರ್ತನೆಗಳ ಮೂಲಕ ಜನರಿಗೆ ತಿಳಿ ಹೇಳಿದರು. ಸಮಾಜದಲ್ಲಿ ಗೊಡ್ಡು ಸಂಪ್ರದಾಯಗಳು , ಆಚರಣೆಗಳು ಮೊದಲಾದವುಗಳನ್ನು ಖಂಡಿಸಿ ಹಾಡಿದ್ದರು. ದಾಸ ಪಂಕ್ತಿಯಲ್ಲಿ ಅಗ್ರಗಣ್ಯರೆಂದರೆ ಪುರಂದರದಾಸರು , ಕನಕದಾಸರು , ಜಗನ್ನಾಥದಾಸರು , ವ್ಯಾಸರಾಯರು , ಮೊದಲಾದವರು ಉಗಾಭೋಗ ಮತ್ತು ಸುಳಾದಿಗಳಲ್ಲಿ ಕೀರ್ತನೆ ರಚಿಸಿ ಸಮಾಜದ ಅಂಕು ಡೊಂಕು ತಿದ್ದಲು ಪ್ರಯತ್ನಿಸಿದರು.

*ಕುಲ ಕುಲವೆನ್ನುತಿಹರು*

*ಕುಲವ್ಯಾವುದು ನಿತ್ಯ ಸುಖವುಳ್ಳ ಜನರಿಗೆ*

*ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ*

*ಕುಲದ ನೆಲೆಯನ್ನೆನಾದರೂ ಬಲ್ಲಿರಾ*

*ಆತ್ಮ ಯಾವ ಕುಲ , ಜೀವ ಯಾವ ಕುಲ*

*ಪಂಚೇಂದ್ರಿಯಗಳ್ಯಾವ ಕುಲ ಪೇಳಿರಯ್ಯಾ.*

ಪ್ರಸ್ತುತ ಸಮಾಜಕ್ಕೆ ಈ ಕೀರ್ತನೆ ಬಹಳ ಪರಿಣಾಮಕಾರಿಯಾದ ಮೌಲ್ಯವುಳ್ಳದ್ದಾಗಿದೆ.ಅಂದಿನ ಸಮಾಜ ಹಾಗೂ ಇವತ್ತಿನ ಸಮಾಜ ಈ ಜಾತಿ ವ್ಯವಸ್ಥೆ ಎಂಬ ಅನಿಷ್ಟ ಪದ್ಧತಿಯಿಂದ ಹೊರತಾಗಿರಲಿಲ್ಲ. ಮನುಕುಲಕ್ಕೆ ಕಂಟಕಪ್ರಾಯವಾಗಿ ಜಾತಿ ವ್ಯವಸ್ಥೆ ಬೇರು ಬಿಟ್ಟಿದೆ. ಕನಕದಾಸರು ತಮ್ಮ ಕೀರ್ತನೆಯಲ್ಲಿ ಕುಲದ ಸಲುವಾಗಿ ಹೊಡೆದಾಡಿ ಅಮೂಲ್ಯವಾದ ಮಾನವ ಸಂಬಂಧಗಳನ್ನು ಹಾಳು ಮಾಡಿಕೊಳ್ಳಬೇಡಿರಿ ಎಂದು ಎಚ್ಚರಗೊಳಿಸಿದ್ದಾರೆ. ಆ ಕುಲದ ಮೂಲವೇ ಮನುಷ್ಯನಿಗೆ ಗೊತ್ತಿರುವುದಿಲ್ಲ. ಆತ್ಮ ಮತ್ತು ಜೀವಕ್ಕೆ ಕುಲಗಳಿರುವುದಿಲ್ಲವೆಂದು ಎಂದು ಹೇಳಿ ಆತ್ಮ ಮತ್ತು ಜೀವ ಯಾವ ಕುಲವೆಂದು ಹೇಳಬೇಕೆಂದು ಸಮಾಜಿಕರಿಗೆ ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ. ಆದಿಕವಿ ಪಂಪನಂತಹ ವ್ಯಕ್ತಿಯು ಸಹಿತ ' ಮಾನವ ಜಾತಿ ತಾನೊಂದೆವಲಂ' ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು. ಭಾರತ ದೇಶದಲ್ಲಿ ಅಂಬೇಡ್ಕರ್ , ಬುದ್ಧ , ಬಸವಣ್ಣ , ಕನಕದಾಸ , ವಾಲ್ಮೀಕಿ ಮೊದಲಾದ ಮಹಾನ್ ವ್ಯಕ್ತಿಗಳನ್ನು ಪ್ರಸ್ತುತ ಸಮಾಜ ಜಾತಿಯ ಸಂಕೋಲೆಯಲ್ಲಿ ಬಂಧಿಸಿ ಅವರನ್ನು ವಿಶ್ವ ಮಾನವರಾಗಲು ಈ ಸಮಾಜ ಬಿಟ್ಟಿಲ್ಲ. ಕನಕದಾಸರು ತಮ್ಮ ಕೀರ್ತನೆಯಲ್ಲಿ ಮಾರ್ಮಿಕವಾಗಿ ತಿಳಿಸಿದ್ದಾರೆ.

## *ಆಧುನಿಕ ಸಾಹಿತ್ಯದಲ್ಲಿ ವೈಚಾರಿಕತೆ :–*

- ***ಶಿವರಾಮ ಕಾರಂತ – ಅಂಧಶ್ರದ್ಧೆಗಳೂ , ಶಕುನಗಳೂ***

**1. ಭೀತಿ :–**

ಮನುಷ್ಯ ಸಮಾಜವು ಹುಟ್ಟಿದಂದಿನಿಂದ ಅದರ ಹಿಂದೆಯೇ ಒಂದು ಬಗೆಯ ಭೀತಿಯು ಬೆನ್ನು ಹತ್ತಿದೆ. ಮನುಷ್ಯನು ಇತರರನ್ನು ಪ್ರೀತಿಸುವುದಾಗಲೀ ಕಲಿಯುವ ಮೊದಲೇ ಭೀತಿಪಡುವುದನ್ನು ಕಲಿತ. ಪ್ರಪಂಚದಲ್ಲಿ ಆಗಾಗ ಕಾಣಿಸುವ ಬಿರುಗಾಳಿ , ನೆರೆಗಳು , ಬೆಂಕಿಗಳು , ಸಿಡಿಲು ಮಿಂಚುಗಳು ಅವನನ್ನು ಬೆದರಿಸಿದವು. ಭೂತ , ಪ್ರೇತ , ಪಿಶಾಚಿಗಳು ಮನುಷ್ಯನ ಭೀತಿಯಿಂದ ನಿರ್ಮಾಣವಾದವು. ಮನುಷ್ಯ ತನ್ನ ದೌರ್ಬಲ್ಯದ ನೆನಪೇ ಹೆದರಿಕೆ.

**2. ಲಾಳ :–**

ನಮ್ಮಲ್ಲಿ ಅನೇಕರು ಕುದುರೆಯ ಲಾಳವೊಂದು ಹಾದಿಯಲ್ಲಿ ಸಿಕ್ಕರೆ ಅದು ಒಳ್ಳೆಯ ಶಕುನವೆಂದು ತಿಳಿಯುತ್ತಾರೆ.

*3. ದಿನಗಳು , ವಾರಗಳು :-*

ಸಾಯುವವರು ದಕ್ಷಿಣಾಯನದಲ್ಲಿ ಸಾಯಬಾರದು , ಉತ್ತರಾಯಣದಲ್ಲಿ ಸತ್ತರೆ ಸ್ವರ್ಗ ದೊರೆಯುತ್ತದೆಂಬ ನಂಬಿಕೆ. ಶುಕ್ರವಾರ ಶುಭವಾರ. ಏಕೆಂದರೆ ದೇವಿಯ ದಿನವೆಂದು ಭಾವಿಸಲಾಗಿತ್ತು.

- ***ಗೀತಾ ನಾಗಭೂಷಣ – ಸಾಹಿತ್ಯ ಸಂವೇದನೆ ಲೇಖನ :-***

ಗೀತಾ ನಾಗಭೂಷಣರವರು ಗದಗನಲ್ಲಿ ಜರುಗಿದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಿಂದ ಆಯ್ದುಕೊಂಡ ಲೇಖನದಲ್ಲಿ

***ಹೆಣ್ಣಾಗಿ ಹುಟ್ಟುವುದಕ್ಕಿಂತ ಮಣ್ಣಾಗಿ ಹುಟ್ಟಿದರೆ***
***ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದರೆ***
***ಪುಣ್ಯವಂತರಿಗೆ ನೆರಳಾದೆ.***

ಇಂತಹ ಹತ್ತಾರು ಜನಪದ ತ್ರಿಪದಿಗಳು ಹೆಣ್ಣಿನ ಜನುಮದ ಬಗೆಗೆ ನಕರಾತ್ಮಕ ಪರಿಕಲ್ಪನೆಯನ್ನು ಕಟ್ಟಿ ಕೊಡುತ್ತದೆ. ಶೋಷಣೆಯ ಹಲವು ಮಜಲುಗಳಲ್ಲಿ ಬಿದ್ದು ಒದ್ದಾಡಿದ ಅಸಂಖ್ಯ ಸ್ತ್ರೀಯರು ಹೀಗಲ್ಲವೆಂದು ಮೆತ್ತಗೆ ಹಾಡಲು ಸಾಧ್ಯವಿತ್ತು ಎಂದು ಒಮ್ಮೆ ಅನಿಸಿದರೆ..

***ಹೆಣ್ಣು ಹೆಣ್ಣಾದರೆ ಗಂಡಿನ ಸೂತಕ***
***ಗಂಡು ಗಂಡಾದರೆ ಹೆಣ್ಣಿನ ಸೂತಕ***
***ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುವಿದೆ***
***ಮುನ್ನಿಲ್ಲದ ಸೂತಕಕ್ಕೆ ಜಗ ಮರುಳಾಯಿತ್ತು ಚನ್ನಮಲ್ಲಿಕಾರ್ಜುನ.***

ಎಂದು ಅಕ್ಕನಂತೆ ಈ ಎಲ್ಲರೂ ಸಿಡಿದೇಳಲಿಲ್ಲವೇಕೆ...? ಎಂದು ಸಾತ್ವಿಕ ಕೋಪ ಬರದೆ ಇರದು ಹೆಚ್ಚುತ್ತಿರುವ ವರದಕ್ಷಿಣೆ ಕಿರುಕುಳ ಇನ್ನೂ ಜೀವಂತವಾಗಿರುವ ಬಾಲ್ಯ ವಿವಾಹ , ದೇವದಾಸಿ ಪದ್ಧತಿ , ಕೌಟುಂಬಿಕ ಹಿಂಸೆ , ಈ ರೋಗಗ್ರಸ್ತ ಸಮಾಜದ ಲಕ್ಷಣಗಳಾಗಿವೆ.

- ***ಎಚ್. ನರಸಿಂಹಯ್ಯ :- ಜ್ಯೋತಿಷ್ಯ ಅರ್ಥಪೂರ್ಣವೋ – ಅರ್ಥರಹಿತವೋ....***

ಮನುಷ್ಯ ಜ್ಯೋತಿಷ್ಯದ ಹಿಂದೆ ಬಿದ್ದು ಸುಳ್ಳು ಮಾಹಿತಿಗಳಿಂದ ಮೋಸ ಹೋಗುವುದು ಸರ್ವೇ ಸಾಮಾನ್ಯವಾಗಿದೆ. ಪ್ರಶ್ನಿಸದೆ ಒಪ್ಪಿಕೊಳ್ಳುವುದು ಸಮಂಜಸವಲ್ಲ. ವೈಚಾರಿಕ ಪ್ರಜ್ಞೆ ಬೆಳಸಿಕೊಳ್ಳುವುದು ಬಹುಮುಖ್ಯ. ಜ್ಯೋತಿಷ್ಯದ ಹಿಂದೆ ಹೋಗಿ ಬದುಕನ್ನು ಹಾಳು ಮಾಡಿಕೊಳ್ಳದಿರುವುದು ಬುದ್ಧಿವಂತಿಕೆಯ ಲಕ್ಷಣ.

ಮನುಷ್ಯನ ಜಾತಕಗಳು , ವಧು –ವರರ ಜಾತಕಗಳು , ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಕಾಣುವ ಸನ್ನಿವೇಶ , ವಿದ್ಯಾಭ್ಯಾಸ , ಮದುವೆ , ವಿದೇಶ ಪ್ರಯಾಣ , ಅಪಘಾತ , ಸಾವು ಇವೆಲ್ಲವುಗಳನ್ನು ಜ್ಯೋತಿಷ್ಯ ನಿರ್ಧರಿಸುತ್ತದೆಂಬ ನಂಬಿಕೆ ಇದೆ. ಜ್ಯೋತಿಷ್ಯದ ಭಾವನೆಯಿಂದ ಹೊರಬರಬೇಕೆಂಬುದು ಎಚ್.ನರಸಿಂಹಯ್ಯನವರು ಹೇಳಿದ್ದಾರೆ.

## ಉಪಸಂಹಾರ :–

ಸಮಾಜದಲ್ಲಿ ಇರುವ ಅಂಧ ಆಚರಣೆಗಳು , ಗೊಡ್ಡು ಸಂಪ್ರದಾಯಗಳು , ಅನಿಷ್ಟ ಪದ್ಧತಿಗಳು , ಜಾತಕಗಳು , ಜ್ಯೋತಿಷ್ಯ ಮೊದಲಾದ ಕೆಟ್ಟ ಸಂಪ್ರದಾಯಗಳು ಹೇಗೆ ಮನುಷ್ಯನನ್ನು ತನ್ನ ನಿಯಂತ್ರಣದಲ್ಲಿರಿಸಿ ಅವುಗಳಿಂದ ಹೊರ ಬರದೆ ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗ ಕನ್ನಡ ಸಾಹಿತ್ಯದಲ್ಲಿ ಇಂತಹ ವೈಚಾರಿಕ ಲೇಖನಗಳು ಹಾಗೂ ವಿಚಾರಧಾರೆಗಳು ಮತ್ತು ಚರ್ಚೆಗಳ ಮುಖಾಮುಖಿಯಾಗಿ ಅಂತಹವುಗಳನ್ನು ಲೇಖನದಲ್ಲಿ , ಪುಸ್ತಕ ರೂಪದಲ್ಲಿ , ಪಠ್ಯ ಪುಸ್ತಕದಲ್ಲಿ ಪ್ರಕಟಿಸಿ ಸಾಹಿತ್ಯಸಕ್ತರಿಗೆ ಮತ್ತು ವಿದ್ಯಾರ್ಥಿಗಳಿಗೆ ಹಾಗೂ ಸಹೃದಯರಿಗೆ ತಲುಪಿಸುವಲ್ಲಿ ಕನ್ನಡ ಸಾಹಿತ್ಯ ಯಶಸ್ಸು ಕಂಡಿದೆ.

## ಗ್ರಂಥ ಋಣ :–


1. *ಕಥನ ಕವನ ಮತ್ತು ವಿಚಾರ ಸಾಹಿತ್ಯ ಸಂಗ್ರಹ :– (ಸಂ) ಪ್ರೊ.ಪಿ.ಜಿ.ಹಿರೇಮಠ ಮತ್ತು ಎಸ್.ಎಸ್. ಕಾಡಮ್ಮನವರ. ಕ.ವಿ.ವಿ.ಧಾರವಾಡ ( ಬಿ.ಎ. ಅಂತಿಮ ವರ್ಷ ಕನ್ನಡ ಅವಶ್ಯ ಪಠ್ಯ ಪುಸ್ತಕ – 2016–17.)*
2. *ಸಾಹಿತ್ಯ ಸಂಚಲನ :– ಪ್ರಥಮ ಪಿ.ಯು.ಸಿ.ಪಠ್ಯ ಪುಸ್ತಕ. (ಪ.ಪೂ.ಇಲಾಖೆ ಬೆಂಗಳೂರು.) (ಜ್ಯೋತಿಷ್ಯ ಅರ್ಥಪೂರ್ಣವೋ – ಅರ್ಥರಹಿತವೋ....) ಎಚ್.ನರಸಿಂಹಯ್ಯನವರ ಆಯ್ದ ಲೇಖನ.*
3. *ವಚನ ಕಮ್ಮಟ :– (ಸಂ) ಕೆ.ಮರುಳಸಿದ್ಧಪ್ಪ ಮತ್ತು ಕಿ.ರಂ.ನಾಗರಾಜ.*
4. *ಕೀರ್ತನಾ ಸಾಹಿತ್ಯ :– (ಸಂ) ಎಚ್.ಎಸ್.ವೆಂಕಟೇಶಮೂರ್ತಿ ಮತ್ತು ಎ.ಶ್ರೀಪಾದ.*
5. *ಜಾನಪದ ಶೋಧ :– ಡಾ. ಶ್ರೀಕಂಠ ಕೂಡಿಗೆ.*